ನುರಿತುಬಿಟ್ಟಳು. ಅವಳ ಸಂಬಳವೂ ಹೆಚ್ಚುತ್ತ ಹೋಗಿತ್ತು.

ಅಲ್ಲಿಗೆ ಬರುತ್ತಿದ್ದ ರೋಗಿಗಳು ತಮ್ಮ ಸಮಸ್ಯೆಗಳ ಬಗ್ಗೆ ಅತ್ಯಂತ ಆರ್ದ್ರವಾಗಿ ಕೇಳಿಸಿಕೊಳ್ಳುತ್ತಿದ್ದ ಈಶ್ವರಿಯಲ್ಲಿ ಮನ ತೋಡಿ ಹೇಳಿಕೊಳ್ಳುತ್ತಿದ್ದರು. ಅವರಿಗೆ ಧೈರ್ಯ ತುಂಬುವಾಗ ಈಶ್ವರಿಯ ನೋವುಗಳಿಗೂ ಮುಲಾಮು ಬೀಳುತ್ತಿತ್ತು. ಜಗತ್ತಿನಲ್ಲಿ ಅದೆಷ್ಟು ತೊಂದರೆಗಳಿವೆ ಎಂದು ಶಾರದಮ್ಮನಿಗೆ ಈಶ್ವರಿ ದಿನವೂ ಹೇಳುತ್ತಿದ್ದಳು.

ತಾವು ಕೆಚ್ಚಿನಲ್ಲಿ ನಿಂತು ಉಳಿಸಿಕೊಂಡ ಮಗಳು ತಮ್ಮ ಕೊನೆಗಾಲಕ್ಕೆ ಯಾವ ಗಂಡು ಮಗುವಿಗೂ ಸಾಟಿಯಿಲ್ಲದಂತೆ ನಿಂತು ನೋಡಿಕೊಳ್ಳುವುದನ್ನು ನೋಡಿದಾಗೆಲ್ಲ ಶಾರದಮ್ಮನ ಕಣ್ಣುಗಳು ಇಂದು ಹೆಮ್ಮೆಯಿಂದ ತೇವವಾಗುತ್ತವೆ. ಇಂತಹ ಚಿನ್ನದಂತ ಮಗಳನ್ನು ಆಡಿಕೊಂಡ ಸಮಾಜದ ಬಗ್ಗೆ ಶಾರದಮ್ಮನಲ್ಲೀಗ ತಿರಸ್ಕಾರವಲ್ಲದೆ ಮತ್ತೇನೂ ಉಳಿದಿಲ್ಲ.

3

ನಲವತ್ತೆರಡನೇ ಎಪಿಸೋಡಿನಲ್ಲಿ ಮುಳುಗಿದ್ದ ಈಶ್ವರಿಗೆ ಈ ಸೀರೀಸ್‌ನ ನಾಯಕ ನಾಯಕಿಯ ಸಾಂಗತ್ಯದ ಪಾಡೇನು ಎನ್ನುವ ಬಗ್ಗೆ ಇನ್ನೂ ಖಾತರಿಯಿರಲಿಲ್ಲ. ಅವರಿಬ್ಬರ ನಡುವೆ ನಡೆಯುತ್ತಿದ್ದುದು ಬರೀ ತ್ಯಾಗಗಳು. ಒಬ್ಬರನ್ನೊಬ್ಬರು ಅಗಲಿ ಬದುಕಬೇಕಾದ ಅನಿವಾರ್ಯಗಳು. ಅಸಲು ಅವರಿಬ್ಬರು ಜೊತೆಯಲ್ಲಿರಲು ಸಾಧ್ಯವೇ ಇಲ್ಲವೇನೋ ಎನ್ನುವಂತೆ ಹೊಸ ಹೊಸ ಸಂದರ್ಭಗಳು ಹುಟ್ಟಿಕೊಳ್ಳುತ್ತಿದ್ದವು. ಆ ರೌದ್ರವಗಳ ನೋವು ಅವಳನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಈಶ್ವರಿ ಪ್ರತಿ ಎಪಿಸೋಡುಗಳನ್ನು ಪರವಶಳಾಗಿ ನೋಡುತ್ತಿದ್ದಳು.

ಯಾವ ಹುಡುಗನನ್ನು ನೋಡಿ ಈಶ್ವರಿಯ ಮೈಮನಸ್ಸು ಸಮ್ಮೋಹಗೊಂಡಿತ್ತೋ ಅವರೆಲ್ಲರೂ ಬೇರೆಯವರನ್ನು ಮದುವೆಯಾಗಿದ್ದರು. ಈಶ್ವರಿಯ ತಲೆದಿಂಬಿನಲ್ಲಿ ಅವರೆಲ್ಲರಿಗೂ ಅಶ್ರುತರ್ಪಣವಾಗಿತ್ತು. ಒಬ್ಬನನ್ನು ಮರೆಯಲು ಇನ್ನೊಬ್ಬನನ್ನು ಮನಸ್ಸಿನಲ್ಲೇ ಪ್ರೇಮಿಸಿದ್ದಳು, ಅಪೇಕ್ಷಿಸಿದ್ದಳು. ಹಳ್ಳಿಯಲ್ಲಿದ್ದಾಗ, ಅವರಲ್ಲೊಬ್ಬ ಈಶ್ವರಿಯನ್ನು ಹಿಂದಿನಿಂದ ಬಲವಾಗಿ ತಬ್ಬಿದ್ದ, ಇವಳೆಷ್ಟೇ ಕೊಸರಿಕೊಂಡರೂ ಬಿಡಿಸಿಕೊಳ್ಳಲು ಆಗದಷ್ಟು ಭದ್ರವಾಗಿ ಇವಳನ್ನು ಆವರಿಸಿದ್ದ. 'ಈಶ್ವರೀ...' ಎಂಬ ಅವನ ಬಿಸಿಯುಸಿರು ಅವಳ ಕೆನ್ನೆಯ ಮೇಲೆ ಬಹುಕಾಲ ಆಡಿತ್ತು. ಅವಳಿನ್ನೇನು ಕರಗುತ್ತಿರುವಾಗಲೇ ಅವನ ಕೈಗೆ ಅವಳ ಸೀಳುತುಟಿಯ ಸ್ಪರ್ಶವಾಗಿತ್ತು. ತಟ್ಟನೆ ಅದ್ಯಾವುದೋ ಮೋಡಿ ಹರಿದಂತೆ ಹಿಡಿತವನ್ನು ಸಡಿಲಗೊಳಿಸಿ ಎಚ್ಚರಗೊಂಡಂತೆ ಸರಸರನೆ ನಡೆದು ಹೋಗಿಬಿಟ್ಟಿದ್ದ. ಈಶ್ವರಿ ಕೂಡಲೇ ಇಹಲೋಕಕ್ಕೆ ಒಗೆಯಲ್ಪಟ್ಟಿದ್ದಳು. ಅವನು ಅವಳ ದೇಹವನ್ನು ಪ್ರೀತಿಸಿದರೂ ಅವಳ ಸೀಳುತುಟಿಗಾಗಿ ಅವಳನ್ನು ನಿರಾಕರಿಸಿದ್ದು ಅವಳಲ್ಲಿ ಅತ್ಯಂತ ಕೆಟ್ಟ ಕೀಳರಿಮೆಯನ್ನು ಸೃಷ್ಟಿಸಿಬಿಟ್ಟಿತ್ತು.

ಅಲ್ಲಿಂದ ಮುಂದಕ್ಕೆ ಎಷ್ಟೋ ಕಾಲ ಅವಳೇ ತನಗೆ



ಮದುವೆಯ ಪ್ರಯತ್ನ ಮಾಡಕೂಡದೆಂದು ಹಟ ಹಿಡಿದಿದ್ದಳು. ನಿರಾಕರಣೆಯ ಭಯ ಅವಳನ್ನು ಬಹುಕಾಲ ಹೆದರಿಸಿತ್ತು. ಸರ್ಜರಿಯಾದ ನಂತರ ಅವಳಲ್ಲಿ ಹೊಸ ಆತ್ಮವಿಶ್ವಾಸ ಚಿಗುರಿತ್ತು. ಇವಳ ಕೆಲಸದ ಚಿಕಿತ್ಸಾಲಯದ ಕೆಳಗಿದ್ದ ಫಾರ್ಮಸಿಯಲ್ಲಿ ಕೆಲಸಮಾಡುತ್ತಿದ್ದ ಸೂರ್ಯ ಅವಳನ್ನು ಮಾತಾಡಿಸುತ್ತಿದ್ದ. ಎಷ್ಟೋ ಔಷಧಗಳನ್ನು ಕೊಡಲು, ಚೀಟಿಗಳನ್ನು ತೆಗೆದುಕೊಂಡು ಹೋಗಲು ಬಂದಾಗೆಲ್ಲ ಇಬ್ಬರಲ್ಲೂ ಆಗುತ್ತಿದ್ದ ಪುಳಕಗಳು ಸುಳ್ಳಾಗಿರಲಿಲ್ಲ. ಕೆಲಸದಲ್ಲಿ ಅವಳಿಗೀಗ ಇನ್ನೊಂದಿಷ್ಟು ಹುರುಪು ಬಂದಿತ್ತು. ಮೊದಲ ಬಾರಿಗೆ ತನ್ನ ದೇಹ, ಬಟ್ಟೆ, ಕೂದಲಿನ ಕಡೆ ಅವಳ ಧ್ಯಾನ ಹರಿದಿತ್ತು. ಅವಳ ಮುಖದಲ್ಲಿ ಕಿರುನಗೆಯನ್ನು ನೋಡುತ್ತಿದ್ದ ಶಾರದಮ್ಮ ನಿಟ್ಟುಸಿರಿಟ್ಟಿದ್ದರು.

ಸೂರ್ಯನಿಗೆ ಮದುವೆಯಾಗಿ ಒಬ್ಬ ಮಗನಿದ್ದ. ಮದುವೆಯಿಲ್ಲದ ಈಶ್ವರಿಯ ಮೇಲೆ ಅವನ ಗಮನ ಹರಿದಿತ್ತೋ ಅಥವಾ ಅವಳು ಇವನನ್ನು ಪ್ರೀತಿಯಿಂದ ನೋಡಿದ್ದರಿಂದ ಅವನ ಆಸಕ್ತಿಗಳು ಕೆರಳಿದ್ದವೋ ಇಬ್ಬರಿಗೂ ಗೊತ್ತಿರಲಿಲ್ಲ.

ತಾನು ಒಂಟಿಯಾಗಿ ಹಾಸಿಗೆಯಲ್ಲಿ ಹೊರಳುವಾಗೆಲ್ಲ ಸೂರ್ಯ ತನ್ನ ಹೆಂಡತಿಯ ಜೊತೆ ಬೆಚ್ಚಗೆ ಮಲಗಿರುವುದನ್ನು ಕಲ್ಪಿಸಿಕೊಂಡು ಈಶ್ವರಿ ಅವನನ್ನು ತನ್ನ ಮನಸ್ಸಿನಿಂದ ದೂರತಳ್ಳಲು ನೋಡಿದ್ದಳು. ಆಶ್ಚರ್ಯವೆನ್ನುವಂತೆ ಅವಳ ಮನಸ್ಸು ಅದನ್ನು ಸಾರಾಸಗಟಾಗಿ ನಿರಾಕರಿಸಿತ್ತು. ಅಸಲು ಅವನಿಗೆ ಮದುವೆಯಾಗಿರುವ ವಿಚಾರ ಈಶ್ವರಿಯನ್ನು ಬಾಧಿಸಿರಲೇ ಇಲ್ಲ. ಅವನೂ ಮತ್ತೊಂದು ಹೊಸ ಅಮಲಿನ ಗುಳ್ಳೆ. ಯಾವತ್ತೂ ಅವಳವನಾಗಲು ಸಾಧ್ಯವೇ ಇರಲಿಲ್ಲ ಎನ್ನುವ ವಿಚಾರವನ್ನು ತಳಕ್ಕೆ ದೂಡಿ ಅವಳ ಮನಸ್ಸು ಅರಳುತ್ತಿದ್ದುದು ಅವಳಲ್ಲಿ ಯಾವ ಅಸಹ್ಯವನ್ನೂ ತರಲಿಲ್ಲ. ಅವಳಲ್ಲಿ ಕನಸು ಬಿತ್ತಿದ ಸೂರ್ಯನ ಬಗ್ಗೆ ಅವಳಿಗೆ ಇನ್ನಿಲ್ಲದ ಪ್ರೀತಿ. ಆದರೆ, ಈ ಕಥೆಯ ನಾಯಕಿಯಂತೇ ಈಶ್ವರಿಯೂ ಕೈಗೆಟುಕದ, ಯಾರಿಗೂ ನೀಡಲಾಗದ ಅವಳ ಪ್ರೀತಿಯನ್ನೇ ಆರಾಧಿಸುತ್ತಿದ್ದಳೋ ಅಥವಾ ಅದರ ಸಂಕಟದಲ್ಲಿ ಬಂಧಿಯಾಗಿ ವಿರಹದ ಹಿಂಸೆಯ ಮೋಡಿಯಲ್ಲಿ ಬೇಯುತ್ತಿದ್ದಳೋ ಎಂದು ತಿಳಿದುಕೊಂಡು ಅವಳಿಗೆ ಏನೂ ಆಗಬೇಕಿರಲಿಲ್ಲ. ಯಾರಲ್ಲೂ ಹೇಳಿಕೊಳ್ಳಲಾಗದ ಅವಳ ಭ್ರಮೆಗಳು ಅವಳವೇ ಆದ ಮೌನದ ಸೊತ್ತುಗಳಾಗಿದ್ದವು. ಅಸಲು ಅವನು ಬದುಕಿನ ಕೆಲ ವರ್ಷಗಳನ್ನು ಕಳೆಯಲು ಈಶ್ವರಿಗೆ ನೆರವಾಗುತ್ತಿದ್ದ ಎನ್ನಬಹುದಿತ್ತೇನೋ. ಅಷ್ಟಕ್ಕೇ ಅವಳು ಅವನಿಗೆ ಆಭಾರಿಯಾಗಿದ್ದಳು.

ಈಶ್ವರಿ ತನ್ನ ಪ್ರೀತಿಯ ಪುಳಕಗಳನ್ನು ಹಂಚಬೇಕೆಂದುಕೊಂಡಾಗಲೆಲ್ಲ ಸೋತಿದ್ದಳು, ನೊಂದಿದ್ದಳು. ಇಷ್ಟಿಷ್ಟೇ ಸತ್ತಿದ್ದಳು. ಆದರೆ, ಕೆಲವು ವರ್ಷಗಳ ನಂತರವಷ್ಟೇ ಅವಳಲ್ಲಿ ಮತ್ತೊಮ್ಮೆ ಜೀವಂತಿಕೆ ಮೂಡಿದ್ದುದು. ಇದೀಗ ಮತ್ತೊಮ್ಮೆ ಅದೇ ಅನಿವಾರ್ಯ ಸೋಲನ್ನೊಪ್ಪಲು ಅವಳು ಸಿದ್ಧಳಿರಲಿಲ್ಲ. 'ಸೂರ್ಯ' ಎಂಬ ನಿಮಿತ್ತ ಅವಳ ಭಾವನೆಗಳಲ್ಲಿ ಜೀವಂತವಾಗಿದ್ದರೆ ಅಷ್ಟು ಸಾಕಿತ್ತು. ಸೋಲು ಕೊನೆಯಲ್ಲಿ ತನ್ನದೇ ಎನ್ನುವ ನಿಜವನ್ನು ಒಪ್ಪಲು ಅವಳ ಮನಸ್ಸು ಹಟಮಾಡುತ್ತಿತ್ತು. ಅಥವಾ ನಿರಾಕರಣೆಯ ನೋವನ್ನು ಮತ್ತೊಮ್ಮೆ ಉಣ್ಣಲು ಅದು ನಿರಾಕರಿಸಿತ್ತು.

ಈ ಚಿತ್ರದ ನಾಯಕಿಯೂ ಕನ್ಯೆಯೇ. ಅವರಿಬ್ಬರೂ ಶತ್ರುಗಳಿಂದ ತಪ್ಪಿಸಿಕೊಳ್ಳಲು ರೈಲೇರಿ ಪಲಾಯನ ಮಾಡುವ ಹವಣಿಕೆಯಲ್ಲಿದ್ದರು. ಛದ್ಮವೇಷದಲ್ಲಿದ್ದ ಇಬ್ಬರೂ ಬೇರೆ ಬೇರೆ ಬೋಗಿಗಳಲ್ಲಿದ್ದರು. ಅವರು ದೇಶವೊಂದರ ಗಡಿರೇಖೆಯನ್ನು ದಾಟಬೇಕಿತ್ತು. ಅಷ್ಟರಲ್ಲಿ ಶತ್ರುಗಳು ಅವಳನ್ನು ಹಿಡಿದೇ ಬಿಟ್ಟರೇನೋ ಎನ್ನುವ ಸಂದರ್ಭ. ಆದರೆ ಅವಳ ರಕ್ಷಣೆಗೆ ನಾಯಕ ಮುಂದಾಗುತ್ತಾನೆ. ಶತ್ರುಗಳ ಗಮನವನ್ನು ತನ್ನೆಡೆಗೆ ಸೆಳೆಯುತ್ತಾನೆ. ಶತ್ರುಗಳು ಅವನತ್ತ ನುಗ್ಗಿದ್ದರಿಂದ ನಾಯಕಿ ಬಚಾವಾಗುತ್ತಾಳೆ. ಅಷ್ಟೂ ಜನ ಶತ್ರುಗಳನ್ನು ಅವಳಿದ್ದ ಬೋಗಿಯಿಂದ ಅವನು ಹಿಂದಿನದ್ದಕ್ಕೆ ಆಕರ್ಷಿಸುತ್ತಾನೆ. ಅವಳಿದ್ದ ಬೋಗಿಯನ್ನು ರೈಲಿನ ಸರಪಣಿಯಿಂದ ಬೇರ್ಪಡಿಸಿ ಅವಳು ಮತ್ತೊಂದು ದೇಶವನ್ನು ತಲುಪುವುದಕ್ಕೆ ಸಹಾಯಮಾಡುತ್ತಾನೆ. ಶತ್ರುಗಳಿಂದ ಪಾರಾಗಲು ಸಾಧ್ಯವೇ ಇಲ್ಲದ ಕಾರಣ ತಾನಿದ್ದ ಇಡೀ ಬೋಗಿಯನ್ನು ಸ್ಫೋಟಿಸಿಕೊಂಡುಬಿಡುತ್ತಾನೆ.

ಅದನ್ನು ಅಸಹಾಯಕವಾಗಿ ನೋಡುತ್ತ ನಿಲ್ಲುವ ನಾಯಕಿಯ ಭೀಕರ ಆಘಾತ ಈಶ್ವರಿಯನ್ನು ಅದುರುವಂತೆ ಮಾಡುತ್ತದೆ. ಅವಳಂತೆಯೇ ಒಂಟಿಯಾಗಿ, ಕನ್ಯೆಯಾಗಿಯೇ ಉಳಿದುಬಿಡುವ ಆ ದುರಂತನಾಯಕಿಯ ಮೇಲೆ ಈಶ್ವರಿಯ ಕನಿಕರ ಮಹಾಪೂರವಾಗಿ ಹರಿಯುತ್ತದೆ. ಇಂತಹ ಅದೆಷ್ಟು ಸಂಭಾವಿತ ನತದೃಷ್ಟ ಹೆಣ್ಣುಮಕ್ಕಳಿದ್ದಾರೋ ಎಂದು ನೆನೆದು ಈಶ್ವರಿ ಗೋಳೋ ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಈಶ್ವರಿಯ ವಯಸ್ಸಿಗಿಂತಲೂ ಹೆಚ್ಚು ಕಾಲದಿಂದ ಒಂಟಿತನವನ್ನು ಹಾಸಿಹೊದ್ದು ಮಲಗಿ ಏಕಾಂಗಿತನದಲ್ಲಿ ಕಣ್ಣೀರು ಸುರಿಸಿ ಕಾಲದೂಡಿದ್ದ ಶಾರದಮ್ಮ ಈಶ್ವರಿಯ ಅಳುವನ್ನು ಕೇಳಿ ಮಲಗಿದಲ್ಲೇ ನಿಡುಸುಯ್ದರೂ ಮಗಳು ಅತ್ತು ಬರಿದಾಗಲೆಂದು ಕಾಯತೊಡಗಿದರು.

ಪ್ರತಿಕ್ರಿಯಿಸಿ: feedback@sudha.co.in